

ನಾನು 'ಅನ್ನಮಾಚಾರ್ಯರ ಸಾಹಿತ್ಯದಲ್ಲಿ ಶೃಂಗಾರದ ಉಲ್ಲೇಖ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡೆ. ಡಾ. ಅನುರಾಧಾ ಮತ್ತು ಕಾನಚೆಟ್ಟಿ ಶ್ರೀನಿವಾಸಲು ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಬರೆದು ಮುಂದಿನ ದಿನಗಳಲ್ಲಿ ಈ ಕುರಿತ ಪುಸ್ತಕವನ್ನು ಪ್ರಕಟಿಸಿದೆ. ಈ ನಡುವೆ ಭಾನುದತ್ತನ ರಸಮಂಜರಿ ಮತ್ತು ಶೃಂಗಾರ ಮಂಜರಿ ಮತ್ತು ಅಕ್ಬರ್ ಶಾ ಕುರಿತ ಎರಡು ಪುಸ್ತಕಗಳು ಪ್ರಕಟವಾದವು.

**◆ ತಂತ್ರಜ್ಞಾನದ ಪ್ರವೇಶವಾದ ಬಳಿಕ ಅದರಲ್ಲಿಯೂ ಡಿಜಿಟಲ್ ಮಾಧ್ಯಮದ ಪ್ರವೇಶದಿಂದ ನೃತ್ಯ ಸಂಗೀತದಂತಹ ಸಾಂಸ್ಕೃತಿಕ ಕ್ಷೇತ್ರದ ನಡೆಯು ಬಿರುಸುಗೊಂಡಿತು ಎನಿಸುತ್ತದೆಯೇ?**

ಡಿಜಿಟಲ್ ಮಾಧ್ಯಮದ ಲಭ್ಯತೆಯು ಕಲಾಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿದೆ ಎಂದು ನನಗೆ ಅನಿಸುತ್ತದೆ. ಡಿಜಿಟಲ್ ಮಾಧ್ಯಮ ಜ್ಞಾನವು ಎಲ್ಲರಿಗೂ ಲಭಿಸುವಂತೆ ಮಾಡಿದೆ. ಹೌದು, ಇಂದು ವೇಗದ ಜೀವನ ಸಾಮಾನ್ಯವಾಗಿದೆ. ನೃತ್ಯದ ಪ್ರಸ್ತುತಿಯು ಕ್ಷಿಪ್ರವಾಗಿರಬೇಕು ಎಂಬ ನಿರೀಕ್ಷೆ ಕಾಣುತ್ತದೆ. ದಿನಗಟ್ಟಲೆ ಪ್ರಸ್ತುತಗೊಳ್ಳುತ್ತಿದ್ದ ಪ್ರಸಂಗಗಳು ಮೂರು ಗಂಟೆಗಳಿಗೆ ಇಳಿದಿದ್ದವು. ಈಗ ನೋಡಿದರೆ ಒಂದು ನಿಮಿಷ ಅಥವಾ ಮೂರು ನಿಮಿಷದ ರೀಲ್ಸ್‌ಗಳು ಬರುತ್ತಿವೆ. ಆದರೆ ರೀಲ್ಸ್‌ಗಳನ್ನು ಮಾಡಬೇಕೆ, ದೀರ್ಘವಾದ, ವಿಸ್ತೃತವಾದ ಪ್ರಸ್ತುತಿಗಳನ್ನು ಮಾಡಬೇಕೇ ಎಂಬುದು ನಿಮ್ಮ ಮುಂದಿರುವ ಆಯ್ಕೆ. ನೀವು ಹಿಡಿದಿರುವ ಮಾರ್ಗದ ಬಗ್ಗೆ ಬಲವಾದ ನಂಬಿಕೆ ಇದ್ದಾಗ ಇವೆಲ್ಲ ಒಂದು ತೊಡಕೆಂದು ಅನಿಸುವುದಿಲ್ಲ. ಡಿಜಿಟಲ್ ಮಾಧ್ಯಮದ ದೆಸೆಯಿಂದಾಗಿ ನನಗೆ ಹೊಸ ತಲೆಮಾರಿನ ಆಸಕ್ತರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಯಿತು. ಕೋವಿಡ್ ಸಂದರ್ಭದಲ್ಲಿಯೇ ನಾನು ಆನ್‌ಲೈನ್ ವರ್ಕ್‌ಶಾಪ್‌ಗಳನ್ನು ನಡೆಸಿದೆ. ಶೃಂಗಾರ, ಗೀತ ಗೋವಿಂದಂ, ಭಕ್ತಿರಸ... ಹೀಗೆ ಅನೇಕ ಶೀರ್ಷಿಕೆಗಳಡಿಯಲ್ಲಿ ನಾನು ವಾರಗಟ್ಟಲೆ ಕಾರ್ಯಾಗಾರಗಳನ್ನು ಮಾಡಿದ್ದೇನೆ. ಇದು ದೇಶ–ಕಾಲದ ಹಂಗಿಲ್ಲದೆ ಜ್ಞಾನ ಪ್ರಸರಣಕ್ಕೆ ಇರುವ ಮಾರ್ಗ ಎಂದು ನಾನು ನಂಬಿದ್ದೇನೆ. ನಮ್ಮ ಸಂವಹನ ರೀತಿಯು ಸಮರ್ಥವಾಗಿದ್ದಾಗ ಸಮಸ್ಯೆಗಳು ಉದ್ಭವಿಸುವುದಿಲ್ಲ. ●